**1** ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಭದ್ರಾವತಿ.

ಸಿ.ಸಿ. ನಂ. **3295 /2023**

| | | |
|---|---|---|
| ಹೆಸರು | : ನೇತ್ರಾವತಿ | ದೋ.ಸಾ. **1** |
| ಗಂಡನ ಹೆಸರು | : ಕೃಷ್ಣಮೂರ್ತಿ | ಪ್ರಾ.ಸಾ. **1** |
| ವಯಸ್ಸು | : 42 ವರ್ಷ | ದಿನಾಂಕಃ **10-07-2024** |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಹಾರೋಬೆನವಳ್ಳಿ | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಈ ಪ್ರಕರಣದ ಸಾಕ್ಷಿದಾರಾದ ಚಾಸಾ- 2 ರಿಂದ 7 ಗೊತ್ತು. ಚಾಸಾ-4 ಮತ್ತು 5 ನನ್ನ ಮಕ್ಕಳು. ಉಳಿದವರು ನಮ್ಮ ಊರಿನವರು.

ಈ ಪ್ರಕರಣದ ಆರೋಪಿ ನನ್ನ ಮೈದುನ.

ನನ್ನ ಗಂಡ ಕ್ಯಾನ್ಸರ್ ಪೀಡಿತನಾಗಿದ್ದು, ಅವರು ಬೀಡಿ ಸೇರಬಾರದು ಮತ್ತು ಮದ್ಯಪಾನ ಮಾಡಬಾರದೆಂದು ವೈದ್ಯರು ಹೇಳಿದ್ದರೂ ಸಹ ದಿನಾಂಕ 1-5-2023 ರಾತ್ರಿ9 ಗಂಟೆಗೆ ನನ್ನ ಗಂಡ ಮನೆಗೆ ಕುಡಿದು ಬಂದು ಬೀಡಿ ಸೇದುತ್ತಿದ್ದರು. ಈ ಬಗ್ಗೆ ನಾನು ನನ್ನ ಗಂಡನ ಬಳಿ ಆಕ್ಷೇಪಣೆ ವ್ಯಕ್ತಪಡಿಸಿದಾಗ ನನ್ನ ಗಂಡ ನನಗೆ ಗದರಿಸುತ್ತಿದ್ದರು. ಅಷ್ಟರಲ್ಲಿ ನಮ್ಮ ಮನೆಯ ಮುಂದಿನ ಮನೆಯಲ್ಲಿ ವಾಸವಿರುವ ಆರೋಪಿ ನಮ್ಮ ಮನೆಗೆ ಬಂದವನೇ ನನ್ನ ಅಣ್ಣನಿಗೆ ಆರೋಗ್ಯ ಸರಿ ಇಲ್ಲದೇ ಇದ್ದರೂ ಅವನಿಗೆ ಬೈಯುತ್ತಿದ್ದೀಯಾ ಎಂದು ಹೇಳಿದವನೇ ನನ್ನ ಕೂದಲು ಹಿಡಿದು ಎಳೆದಾಡಿ, ಕಾಲಿನಿಂದ ಜಾಡಿಸಿ ಒದ್ದು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದ. ಆಗ ನನ್ನನ್ನು ಆರೋಪಿತರ ಕೈಯಿಂದ ನನ್ನ ಮಕ್ಕಳಾದ ಚಾಸಾ- 4 ಮತ್ತು 5 ರವರು ಬಿಡಿಸಲು ಬಂದರು. ಅವರಿಗೂ ಆರೋಪಿ ಹೊಡೆದರು. ನನ್ನ ಮಗನನ್ನು ಆರೋಪಿ ಕಾಲು ಹಿಡಿದು ಎಳೆದುಕೊಂಡು ಹೋಗಿ

ಕಾಲಿನಿಂದ ತುಳಿದನು. ಆಗ ಚಾಸಾ-6 ಮತ್ತು 7 ರವರು ಬಂದು ಗಲಾಟೆ ಬಿಡಿಸಿದರು. ನಂತರ ನಾನು, ಚಾಸಾ- 4 ಮತ್ತು 5 ರವರು ಹೊಳೆ ಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದೆವು.

ಅದೇ ದಿನ ಆರೋಪಿಯ ವಿರುದ್ಧ ದೂರು ಕೊಡಲು ಹೊರಟಾಗ ನಮ್ಮ ಊರಿನ ಮುಖಂಡರು ಬೇಡ ಎಂದು ಹೇಳಿದರು. ಆರೋಪಿ ನಮ್ಮ ಸಂಬಂಧಿಕನಾಗಿರುವುದರಿಂದ ನಾವು ದೂರು ಕೊಡಲಿಲ್ಲ. ನಂತರ ನಮ್ಮ ಸಂಬಂಧಿಕರು ಆರೋಪಿಗೆ ಬುದ್ದಿ ಮಾತು ಹೇಳಲು ಹೋದಾಗ ಆತ ಅವರ ಮಾತು ಕೇಳದೇ ಅವರ ಬಳಿ ಜೋರಾಗಿ ಮಾತನಾಡಿರುತ್ತಾರೆ. ಆದ್ದರಿಂದ ದಿನಾಂಕ 3-5-2023 ರಂದು ತಡವಾಗಿ ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ.

ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-1 ಎಂದು ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿನಾಂಕ 5-5-2023 ರಂದು ಪೊಲೀಸರು ನಮ್ಮ ಮನೆಯ ಬಳಿ ಬಂದು ನಾನು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಆರೋಪಿಯು ನನಗೆ ಹೊಡೆಯಲು ಬಳಸಿದ ದೊಣ್ಣೆಯನ್ನು ಜಪ್ತು ಮಾಡಿದರು ಮತ್ತು ಒಂದು ನಕಾಶೆ ಬರೆದರು. ಪಂಚನಾಮೆಯನ್ನು ಪೊಲೀಸರು ಮಧ್ಯಾಹ್ನ 12-00 ರಿಂದ 1-00 ಗಂಟೆಯವರೆಗೆ ಬರೆದರು.

ಪಂಚನಾಮೆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-2 ಎಂದು ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-3 ಎಂದು ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪೊಲೀಸರು ಜಪ್ತು ಮಾಡಿದ ದೊಣ್ಣೆಯನ್ನು ಈಗ ನೋಡಿ ಗುರುತಿಸುತ್ತಿದ್ದು,

ಅದನ್ನು ಈಗ ಮು.ಮಾ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪೊಲೀಸರ ಮುಂದೆ ಕೊಟ್ಟಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಆರೋಪಿ ನನಗೆ ಹಾದರ್ಗಿತ್ತಿ ಬೇವರ್ಸಿ ಮುಂಡೆ ಅವಾಚ್ಯ ಶಬ್ದಗಳಿಂದ ಬೈದ ಎಂದರೆ ಸರಿ. ಚಾಸಾ- 6 ಮತ್ತು 7 ರವರು ಗಲಾಟೆ ಬಿಡಿಸಿದ ನಂತರ ಆರೋಪಿ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಹೊಡೆದು ಸಾಯಿಸುತ್ತೇನೆಂದು ಜೀವ ಬೆದರಿಕೆ ಹಾಕಿದ ಎಂದರೆ ಸರಿ.

ಪೊಲೀಸರು ದಿನಾಂಕ 4-5-2023 ರಂದು ಘಟನಾ ಸ್ಥಳಕ್ಕೆ ಬಂದು ನಿಪಿ-2 ರ ಪಂಚನಾಮೆ ಬರೆದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಿ. ವಿ.. ವಕೀಲರಿಂದಃ

ನಮ್ಮ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಮಕ್ಕಳು ವಾಸವಿದ್ದೇವೆ. ನನ್ನ ಗಂಡನ ತಾಯಿ ಆರೋಪಿತರ ಜೊತೆ ವಾಸವಿದ್ದಾರೆ. ನನ್ನ ಗಂಡ ಮತ್ತು ಆತನ ಸಹೋದರನಾದ ಆರೋಪಿ 10 ವರ್ಷದ ಹಿಂದೆ ಬೇರೆಯಾಗಿರುತ್ತಾರೆ. ಆರೋಪಿ ಮತ್ತು ನಮ್ಮ ನಡುವೆ ಜಮೀನಿನ ವಿಚಾರವಾಗಿಯು ತಕರಾರು ಇದೆ ಎನ್ನುವುದು ಸರಿಯಲ್ಲ. ಕಳೆದ 7-8 ವರ್ಷಗಳಿಂದ ಆರೋಪಿ ಮತ್ತು ನಮ್ಮ ನಡುವೆ ಮಾತುಕತೆ ಇರುವುದಿಲ್ಲ. ನಾನು ಮದುವೆಯಾದಾಗಿನಿಂದಲೂ ನನ್ನ ಗಂಡ ಮದ್ಯಪಾನ ಮಾಡುತ್ತಿದ್ದಾರೆ.

ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಹೇಮರಾಜ್ ಮತ್ತು ರಂಗಪ್ಪರವರ ಮನೆ ಇದೆ. ಸದರಿ ಗಲಾಟೆ ಬಿಡಿಸಲು ಸದರಿಯವರು ಬಂದಿಲ್ಲ. ಸದರಿಯವರು ಈ ಹಿಂದೆ ನನ್ನ ಮತ್ತು ನನ್ನ ಗಂಡನ ನಡುವೆ ಜಗಳ ಆದಾಗ ಬಿಡಿಸಲು ಬಂದು ಬುದ್ದಿ ಮಾತು ಹೇಳಿರುತ್ತಾರೆ. ಕಳೆದ 7-8 ವರ್ಷಗಳಿಂದ ನಾನು ಮತ್ತು ನನ್ನ ಗಂಡ ಜಗಳ ಮಾಡಿಕೊಂಡಾಗ ನಮ್ಮ ವಿಚಾರಕ್ಕೆ ಆರೋಪಿ ಯಾವತ್ತು ಬಂದಿಲ್ಲ ಎಂದರೆ ಸರಿ. ಆರೋಪಿ ನನ್ನ ಅತ್ತೆಯನ್ನು ನೋಡಿಕೊಂಡು

ಜಮೀನಿನಲ್ಲಿ ಉಳುಮೆ ಮಾಡಿ ಆತನ ಜೀವನ ನಡೆಸುತ್ತಿದ್ದಾನೆ ಎಂದರೆ ಸರಿ. ಚಾಸಾ-5 ರಿಂದ 7 ರವರು ನಮ್ಮ ಪರಿಚಯಸ್ಥರು ಎಂದರೆ ಸರಿ. ಸದರಿಯವರ ಜೊತೆ ನಾವು ವಿಶ್ವಾಸದಿಂದ ಇದ್ದೇವೆ ಎಂದರೆ ಅವರು ನಮ್ಮ ಊರಿನವರು ಎನ್ನುತ್ತಾರೆ.

ನಮ್ಮ ಮನೆಯಿಂದ ಹೊಳೆ ಹೊನ್ನೂರು ಪೊಲೀಸ್ ಠಾಣೆ ಸುಮಾರು 10-15 ಕಿ.ಮೀ. ದೂರದಲ್ಲಿದೆ. ಸದರಿ ಠಾಣೆಗೆ ನಮ್ಮ ಮನೆಯಿಂದ 5-10 ನಿಮಿಷದಲ್ಲಿ ಹೋಗಬಹುದು ಎಂದರೆ ಸರಿ.

ಗಲಾಟೆಯಲ್ಲಿ ನನಗೆ ಯಾವುದೇ ರಕ್ತಗಾಯ ಆಗಿರಲಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಬೆನ್ನಿನ ಭಾಗ ಊದಿತ್ತು ಎನ್ನುತ್ತಾರೆ.

ಗಲಾಟೆ ನಡೆಯಿತು ಎನ್ನಲಾದ ದಿನ ಅಥವಾ ಅದರ ಮರು ದಿನ ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ಕೊಡಲು ತೊಂದರೆ ಏನು  ಇರಲಿಲ್ಲ ಎಂದರೆ ಸಾಕ್ಷಿ ನನ್ನ ಸಂಬಂಧಿಕರು ಬೇಡ ಎಂದು ಹೇಳಿದರು, ಹಾಗಾಗಿ ದೂರು ಕೊಡಲಿಲ್ಲ ಎನ್ನುತ್ತಾರೆ. ಸದರಿ ಸಂಬಂಧಿಕರ ಹೆಸರು ಶ್ರೀನಿವಾಸ ಮತ್ತು ನಾಗೇಶಪ್ಪ. ಶ್ರೀನಿವಾಸ ಮತ್ತು ನಾಗೇಶಪ್ಪರವರ ಬುದ್ಧಿ ಮಾತಿ ಮೇರೆಗೆ ನಾನು ಆರೋಪಿ ಮೇಲೆ ದೂರು ಕೊಡಲಿಲ್ಲ ಎಂದು ನಿಪಿ-1 ರ ದೂರಿನಲ್ಲಿ ಹೇಳಿಲ್ಲ. ದೂರನ್ನು ತಡವಾಗಿ ಕೊಡಲು ಕಾರಣವೇನು ಎಂಬುವುದನ್ನು ನಿಪಿ-1 ರ ದೂರಿನಲ್ಲಿ ಬರೆದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಆಸ್ಪತ್ರೆಗೆ ಹೋಗಿದ್ದಾಗ ಪೊಲೀಸರು ಅಲ್ಲಿಗೆ ಬಂದಿದ್ದರು. ಸದರಿ ದಿನ ಪೊಲೀಸರ ಮುಂದೆ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ಹೇಳಿದ್ದೇನೆ. ಆ ಸಂದರ್ಭದಲ್ಲಿ ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿ ಸ್ವ ಇಚ್ಛೆಯಿಂದ ಆಸ್ಪತ್ರೆಯಲ್ಲಿ ನಾನು ಸಹಿ ಮಾಡಿಲ್ಲ ಎನ್ನುತ್ತಾರೆ. ನಾನು ಆಸ್ಪತ್ರೆಗೆ ಹೋಗಿಲ್ಲ ಮತ್ತು ಅಲ್ಲಿಗೆ ಪೊಲೀಸರು ಬಂದಿಲ್ಲ, ಆದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿರುವ ಯಾವುದೇ ಘಟನೆ ನಡೆಯದೇ ಇರುವುದರಿಂದಲೇ ಆರೋಪಿಯ ವಿರುದ್ಧ ಅದೇ ದಿನ ದೂರು ಕೊಡದೇ 3 ದಿನಗಳ ನಂತರ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಜಮೀನಿನ ವಿಚಾರವಾಗಿ ತಕರಾರು ಇರುವುದರಿಂದ ಆರೋಪಿಯನ್ನು ಹೆದರಿಸುವ ಉದ್ದೇಶದಿಂದ ನಿಪಿ-1 ರಂತೆ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

ಮು.ಮಾ- 1 ರ ರೀತಿಯ ದೊಣ್ಣೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಆರೋಪಿ ಸದರಿ ದೊಣ್ಣೆಯಿಂದ ನನಗೆ ಹೊಡೆದಿದ್ದ ಎನ್ನುತ್ತಾರೆ. ಈ ಪ್ರಕರಣಕ್ಕೂ ಮು.ಮಾ- 1 ಕ್ಕೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೊಲೀಸರು ಫೋಟೋ ತೆಗೆದಿದ್ದರು. ಪೊಲೀಸರು ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಬಂದಿಲ್ಲ ಮತ್ತು ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ವಸ್ತುವನ್ನು ಜಪ್ತು ಮಾಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ನಿಪಿ-2 ಮತ್ತು 3 ರ ದಾಖಲೆಗಳಿಗೆ ನನ್ನ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಪಡೆದಿದ್ದಾರೆ ಎಂದರೆ ಸರಿ.

ಆಸ್ತಿ ವಿಚಾರವಾಗಿ ಆರೋಪಿಯ ವಿರುದ್ಧ ಸುಳ್ಳು ದೂರು ಕೊಟ್ಟು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂ. ಭದ್ರಾವತಿ.**

Case called out.

Accused No. 1 is present.

A 2 to 6 are absent. EP filed and allowed.

CW 4 is present and examined as PW3.

Ex.P 3 is marked.

Ln.APP prays to issue witness summons to CW 2, 3 and 6 to 15.

However, upon perusal of the evidence available on record it is evident that, the first informant /PW-1 Ganglibai and injured witnesses namely, PW 2 and 3 being material witnesses have not at all supported the prosecution and they turned hostile.

Hence, issuing summons to the rest of the witnesses and examining them would not serve any purpose and it will be nothing but a futile exercise.

Hence the prayer of the APP is rejected.

CW 2, 3 and 6 to 15 are dropped.

No incriminating evidence available against the accused persons.

Hence statement of the accused U/Sec.313 is dispensed with.

Heard both side.

For Judgment.

**Call on**